

## #BinIsolationOuting

ಕೆಲಸ ಕಳೆದುಕೊಳ್ಳುವುದು ಲಾಕ್‌ಡೌನ್‌ನ ದೊಡ್ಡ ಸವಾಲು. ಈಚೆಗಷ್ಟೇ ಭಾರೀ ಕಾಳ್ಗಿಚ್ಚಿನಿಂದ ಚೇತರಿಸಿಕೊಂಡಿದ್ದ ಆಸ್ಟ್ರೇಲಿಯಾದಲ್ಲಿ ಲಾಕ್‌ಡೌನ್‌ನಿಂದಾಗಿ ಸುಮಾರು 30 ವರ್ಷದಷ್ಟು ಪ್ರಗತಿ ಹಾಳಾಗಿದೆ. ತಲ್ಲಣದ ಕಾಲದಲ್ಲಿ ಖುಷಿ ಹುಡುಕಿಕೊಳ್ಳುವ ಕೆಲವರ ಯತ್ನದ ಫಲವಾಗಿ ಈ ಚಾಲೆಂಜ್ ರೂಪುಗೊಂಡಿತು. ಬಿನ್ ಐಸೊಲೇಷನ್ ಔಟಿಂಗ್ ಹೆಸರಿನ ಫೇಸ್‌ಬುಕ್ ಪುಟವು ಕೆಲವೇ ದಿನಗಳಲ್ಲಿ 10 ಲಕ್ಷಕ್ಕೂ ಹೆಚ್ಚು ಲೈಕ್‌ಗಳನ್ನು ಸಂಪಾದಿಸಿತ್ತು. ಎಲ್ಲ ರೋಗಗಳಿಗೆ ನಗುವೇ ದೊಡ್ಡ ಮದ್ದು. ಅದಕ್ಕೆ ತಕ್ಕಂತೆ ಡ್ರೆಸ್ ಮಾಡಿಕೊಳ್ಳಿ. ನಿಮ್ಮೊಳಗಿರುವ ಕಲಾವಿದರನ್ನು ಹೊರತನ್ನಿ ಎನ್ನುವುದು ಈ ಗ್ರೂಪ್‌ನ ಮಂತ್ರ. ವಿಶಿಷ್ಟವಾಗಿ ಡ್ರೆಸ್ ಮಾಡಿಕೊಂಡು, ಕಸದಡಬ್ಬಿ ಎತ್ತಿಕೊಂಡು ಓಡಾಡುವ ಚಾಲೆಂಜ್ ಇದು.

## post what you're doing right now

ಇದು ವಿಶ್ವದ ಹಲವು ದೇಶಗಳಲ್ಲಿ ಇದ್ದು ಮಾಡಿದ ಜನಪ್ರಿಯ ಚಾಲೆಂಜ್. ನೀವು ಈಗ ಏನು ಮಾಡುತ್ತಿದ್ದೀರಿ ಎಂಬುದನ್ನು ಯಥಾವತ್ತಾಗಿ ಬರೆದು ನಿಮ್ಮ ಗೆಳೆಯರನ್ನು ಟ್ಯಾಗ್ ಮಾಡಬೇಕು ಅನ್ನೋದಷ್ಟೇ ಈ ಚಾಲೆಂಜ್‌ನ ನಿಯಮ.

## ಸೇಫ್‌ಹ್ಯಾಂಡ್ಸ್ ಚಾಲೆಂಜ್

ವಿಶ್ವ ಆರೋಗ್ಯ ಸಂಸ್ಥೆಯು ಕೊರೊನಾ ಬಗ್ಗೆ ಜಾಗತಿ ಮೂಡಿಸಲು #safehands challenge ಆರಂಭಿಸಿತು. ಜನರಿಗೆ ಕೈತೊಳೆಯುವ ಬಗ್ಗೆ ಜಾಗೃತಿ ಮೂಡಿಸುವ ಉದ್ದೇಶದಿಂದ ಆರಂಭವಾದ ಈ ಚಾಲೆಂಜ್‌ನಲ್ಲಿ ಸೆಲೆಬ್ರಿಟಿಗಳು ಉತ್ಸಾಹದಿಂದ ಪಾಲ್ಗೊಂಡರು. ತರಹೇವಾರಿ ವಿಡಿಯೊಗಳನ್ನು ಪೋಸ್ಟ್ ಮಾಡಿದರು.

## #PillowChallenge

ಭಾರತ ಸೇರಿದಂತೆ ಹಲವು ದೇಶಗಳಲ್ಲಿ ಜನಪ್ರಿಯವಾದ ಚಾಲೆಂಜ್. ತಲೆದಿಂಬನ್ನು ಮುಂದಿಟ್ಟುಕೊಂಡು, ಅದಕ್ಕೊಂದು ಬೆಲ್ಟ್ ಬಿಗಿಸಿಕೊಂಡ ಚಿತ್ರವನ್ನು ಸೋಷಿಯಲ್ ಮೀಡಿಯಾಗಳಲ್ಲಿ ಹಾಕಿಕೊಳ್ಳುವ ಚಾಲೆಂಜ್ ಇದು. ಹಾಲಿವುಡ್ ನಟಿಯರಾದ ಹಲ್ಲೆ ಬೆರ್ರಿ, ಟ್ರಾಸೀ ಎಲ್ಲಿಸ್ ರೊಸ್ ಮತ್ತು ಆನ್ ಹ್ಯಾತ್‌ವೆ ಸಹ ಈ ಚಾಲೆಂಜ್‌ನಲ್ಲಿ ಪಾಲ್ಗೊಂಡಿದ್ದರು. ಭಾರತದಲ್ಲಿ ತಮನ್ನಾ, ಪರುಲ್ ಯಾದವ್ ಸೇರಿ ಹಲವರು ಕಾಣಿಸಿಕೊಂಡರು. ಮಕ್ಕಳಿಗೆ, ಸಾಕು ಪ್ರಾಣಿಗಳಿಗೆ ದಿಂಬು ಬಿಗಿದ ಚಿತ್ರಗಳು ಕಾಣಿಸಿಕೊಂಡಿವೆ.

ಚಿತ್ರ, ವಿಡಿಯೊ ಹಾಕಲು ನಾವು ಯಾರಿಗೂ ದುಡ್ಡು ಕೊಡಬೇಕಿಲ್ಲ. ಆದರೆ ನಾವು ಹಾಕುವ ಕಂಟೆಂಟ್‌ನಿಂದ ಯಾರುಯಾರಿಗೋ ದುಡ್ಡು ಬರುತ್ತಿರುತ್ತೆ. ನಾವು ಅಪ್‌ಲೋಡ್ ಮಾಡುವ ಕಂಟೆಂಟ್ ಈ ವ್ಯವಹಾರದ ದೊಡ್ಡ ಸರಕು. ಪೋಸ್ಟ್‌ಗಳನ್ನು ಹಾಕುವ ಮೂಲಕ ಪರೋಕ್ಷವಾಗಿ ಸಾಮಾಜಿಕ ಮಾಧ್ಯಮದ ಕಂಪನಿಗೆ, ಅದರ ಮೂಲಕ ಗ್ರಾಹಕರನ್ನು ಸೆಳೆದು ತಮ್ಮ ಉತ್ಪನ್ನ ಮಾರುವ ಕಂಪನಿಗಳಿಗೆ ಸಹಾಯ ಮಾಡುತ್ತಿರುತ್ತೇವೆ. ಜಿಲ್ಲೆ, ರಾಜ್ಯ ಮತ್ತು ದೇಶಗಳೆಂಬ ಗಡಿಯಿಲ್ಲದೆ ಪೋಸ್ಟ್‌ಗಳ ಪ್ರಸರಣ ಮತ್ತು ಹಣ ಗಳಿಕೆ ಸಾಗುತ್ತಿರುತ್ತದೆ.

ಇದರ ಜೊತೆಗೆ ಬಳಕೆದಾರರ ವೈಯಕ್ತಿಕ ಚಟುವಟಿಕೆಗಳನ್ನು ಜಿಪಿಎಸ್ ಮತ್ತು ಇತರ ಮಾರ್ಗಗಳ ಮೂಲಕ ಈ ಸಾಮಾಜಿಕ ಮಾಧ್ಯಮಗಳು ಗಮನಿಸುತ್ತವೆ. ನಿಮ್ಮ ಪೋಸ್ಟ್‌ಗಳನ್ನು ಓದುವ ಅವರ ಸೂತ್ರಗಳು (ಅಲ್ಗರಿದಂ) ನಿಮ್ಮ ವ್ಯಕ್ತಿತ್ವ ಚಿತ್ರಣ ಬಿಡಿಸಿಡುತ್ತವೆ (ಪರ್ಸನಾಲಿಟಿ ಪ್ರೊಫೈಲ್), 'ಪರ್ಸನಲೈಸ್ಡ್ ಆಡ್' ಹೆಸರಿನಲ್ಲಿ ನಿಮ್ಮ ಆಸಕ್ತಿಗೆ ಹೊಂದುವಂಥ ಜಾಹೀರಾತು ತೂರಿಬಿಡುತ್ತವೆ.

ಒಂದು ಸಣ್ಣ ಪ್ರಯೋಗ ಮಾಡಿ. ರಿಜಿಸ್ಟ್ರೇಶನ್ ಸಂದರ್ಭ ನೀವು ಗಂಡು ಎಂಬುದಕ್ಕೆ ಟಿಕ್ ಮಾಡಿದ್ದರೆ ನಿಮಗೆ ಹೆಣ್ಮಕ್ಕಳ ಪೋಸ್ಟ್‌ಗಳೇ



ಪಿಲ್ಲೊ ಚಾಲೆಂಜ್